# ಸೆನ್ಸಾರ್

## ಅಗ್ನಿದಿವ್ಯದಲ್ಲಿ ಕನ್ನಡ

★ ಚ.ಹ.ರಘುನಾಥ



ಸೆನ್ಸಾರ್ ಎನ್ನುವುದನ್ನು ಒಂದು ಅಗ್ನಿಪರೀಕ್ಷೆ ಎನ್ನುವುದಾದರೆ, ಆ ಪರೀಕ್ಷೆಯಲ್ಲಿ ಮೈಸುಟ್ಟುಕೊಂಡ ಚಿತ್ರಗಳೇ ಹೆಚ್ಚು. ಕನ್ನಡ ಸಿನಿಮಾಗಳ ಹಿನ್ನೆಲೆಯಲ್ಲಿ ಸೆನ್ಸಾರ್‌ನೊಂದಿಗಿನ ಗುದ್ದಾಟವನ್ನು ಅರವತ್ತರ ದಶಕದಿಂದಲೇ ಗುರ್ತಿಸಬಹುದು. ಆಗಿನ್ನೂ 'ಚಲನಚಿತ್ರ ಪ್ರಮಾಣೀಕರಣ ಸಮಿತಿ'ಯ (ಸಿಬಿಎಫ್‌ಸಿ) ಪ್ರಾದೇಶಿಕ ಕಚೇರಿ ಬೆಂಗಳೂರಿನಲ್ಲಿ ಇರಲಿಲ್ಲ. ಸೆನ್ಸಾರ್ ಪ್ರಮಾಣಪತ್ರಕ್ಕಾಗಿ ಮದರಾಸಿನ ಕಚೇರಿಯನ್ನೇ ಅವಲಂಬಿಸಬೇಕಿತ್ತು. ಅಲ್ಲಿನ ಸಮಿತಿಯಲ್ಲಿ ತಮಿಳರ ಪಾರುಪತ್ಯವೇ ಹೆಚ್ಚಾಗಿದ್ದು, ಅವರು ಕನ್ನಡ ಚಿತ್ರಗಳ ಬಗ್ಗೆ ವೃಥಾ ತಕರಾರು ತೆಗೆಯುತ್ತಿದ್ದರಂತೆ. ತಮಿಳು ಚಿತ್ರಗಳ ಮಟ್ಟಿಗೆ ಪಥ್ಯವೆನ್ನಿಸಿದ್ದು, ಕನ್ನಡ ಸಿನಿಮಾ ಸಂದರ್ಭದಲ್ಲಿ ಕತ್ತರಿ ಪ್ರಯೋಗಕ್ಕೆ ಒಳಗಾಗುತ್ತಿತ್ತು. ಈ ಮಲತಾಯಿ ಧೋರಣೆಗೆ ಬೇಸತ್ತ ಕನ್ನಡ ಚಿತ್ರ ನಿರ್ಮಾತೃಗಳು ಸೆನ್ಸಾರ್ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವಂತೆ ಒತ್ತಾಯಿಸಿದರು. ಅದು ಕಾರ್ಯರೂಪಕ್ಕೆ ಬಂದುದು 1982ರಲ್ಲಿ.

'ಸಂಸ್ಕಾರ'ದಿಂದ ಹಿಡಿದು ಇತ್ತೀಚಿನ 'ಕಿರಗೂರಿನ ಗಯ್ಯಾಳಿಗಳು' ಚಿತ್ರಗಳವರೆಗೆ ಅನೇಕ ಕನ್ನಡ ಚಿತ್ರಗಳು ಸೆನ್ಸಾರ್ ವಿರುದ್ಧ ಗುದ್ದಾಟ ನಡೆಸಿವೆ. ಕೆಲವರಂತೂ ನಿಮ್ಮ ಸಹವಾಸವೇ ಬೇಡ ಎಂದು ಕೋರ್ಟ್ ಮೊರೆ ಹೋಗಿ ತಮ್ಮ ಚಿತ್ರಗಳನ್ನು ತೆರೆ ಕಾಣಿಸಿದ್ದಾರೆ. ಅಪರೂಪಕ್ಕೆ, ಸಿನಿಮಾಗಳ ಪರವಾಗಿ ಸೆನ್ಸಾರ್ ಮಂಡಳಿ ಸದಸ್ಯರು ಒಳ್ಳೆಯ ಮಾತುಗಳನ್ನು ಆಡಿದ್ದೂ ಇದೆ. ಸೆನ್ಸಾರ್‌ಗೆ ಸಂಬಂಧಿಸಿದಂತೆ ಕನ್ನಡದ ಪ್ರಮುಖ ಚಿತ್ರಗಳ ಕೆಲವು ಪ್ರಕರಣಗಳನ್ನು ಗಮನಿಸಬಹುದು.




### ಮಹಾತ್ಮ ಕಬೀರ್

ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ ಆರ್. ನಾಗೇಂದ್ರರಾಯರನ್ನು 'ಮಹಾತ್ಮ ಕಬೀರ್' (1947) ಚಿತ್ರದ ಕಾರಣಕ್ಕಾಗಿ ಇಲ್ಲಿ ನೆನಪಿಸಿಕೊಳ್ಳಬೇಕು. ಈ ಚಿತ್ರದ ಕಥೆ, ಚಿತ್ರಕಥೆ, ನಿರ್ದೇಶನ ಅವರದೇ. ಸ್ವಾತಂತ್ರ್ಯ ಬಂದ ದಿನಗಳಲ್ಲಿ ದೇಶದಲ್ಲಿ ನಡೆದ ಹಿಂದೂ– ಮುಸ್ಲಿಂ ಹತ್ಯಾಕಾಂಡ ಪ್ರಜ್ಞಾವಂತರಿಗೆ ನೋವುಂಟು ಮಾಡಿದ್ದ ದಿನಗಳವು. ಇಂಥ ಸಂದರ್ಭದಲ್ಲಿ, ಹಿಂದೂ ಮುಸ್ಲಿಂ ಏಕತೆಯ ಸಂದೇಶವನ್ನು ಸಾರುವ ಕಬೀರದಾಸರ ಕಥೆಯನ್ನು ನಾಗೇಂದ್ರರಾಯರು ಆರಿಸಿಕೊಂಡರು. ಈ ಚಿತ್ರ ಸೆನ್ಸಾರ್‌ನಿಂದ ಹಸಿರು ನಿಶಾನೆ ಪಡೆಯುವ ಬಗ್ಗೆ ಕೆಲವರಿಗೆ ಅನುಮಾನವಿತ್ತು. ನಿರ್ಮಾಪಕರು ಕೂಡ ಆತಂಕ ಹೊಂದಿದ್ದರು. ಸೆನ್ಸಾರ್ ಅಧಿಕಾರಿ ಸಂಬಂಧಮ್ ಮೊದಲಿಯಾರ್ ಶಿಸ್ತಿಗೆ ಹೆಸರಾದವರು. ಅವರು ಸಿನಿಮಾ ನೋಡಲಿಕ್ಕೆಂದು ಹೈದರಾಬಾದ್‌ನಿಂದ ಕೆಲವು ಮುಸ್ಲಿಂ ಸಿ.ಐ.ಡಿ.ಗಳನ್ನು ಕರೆಸಿದ್ದರು. 'ಮಹಾತ್ಮ ಕಬೀರ್' ಚಿತ್ರವನ್ನು ವೀಕ್ಷಿಸಿದ ಅವರು ಹೇಳಿದ್ದು – 'ಇಂಥ ಇನ್ನಷ್ಟು ಚಿತ್ರಗಳನ್ನು ನೋಡಲು ಭಗವಂತ ನಮಗೆ ಆಯುಷ್ಯ ನೀಡಲಿ'.

ಮುಸ್ಲಿಂ ಅಧಿಕಾರಿಗಳು ಕೂಡ ಚಿತ್ರವನ್ನು ಮೆಚ್ಚಿಕೊಂಡರು. ಹೈದರಾಬಾದ್‌ನಲ್ಲಿ ಕಬೀರ್ ಚಿತ್ರ ಪ್ರದರ್ಶಿಸುವಂತೆ ಒತ್ತಾಯಿಸಿದರು. ಮೈಸೂರಿನಲ್ಲಿ 'ಮಹಾತ್ಮ ಕಬೀರ್' ನೂರು ದಿನಗಳ ಪ್ರದರ್ಶನ ಕಂಡಿತು. ಆದರೆ, ಹಿಂದೂ–ಮುಸ್ಲಿಂ ಗಲಭೆ ಭುಗಿಲೆದ್ದುದರಿಂದ ಬೆಂಗಳೂರಿನಲ್ಲಿ ಕಬೀರ್ ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ!

### ಸಂಸ್ಕಾರ

'ಸಂಸ್ಕಾರ' (1970) ಕನ್ನಡಕ್ಕೆ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ದೊರಕಿಸಿಕೊಟ್ಟ ಮೊದಲ ಕನ್ನಡ ಸಿನಿಮಾ. ಪಟ್ಟಾಭಿ ರಾಮರೆಡ್ಡಿ ನಿರ್ದೇಶನದ, ಯು.ಆರ್. ಅನಂತಮೂರ್ತಿ ಅವರ ಕಾದಂಬರಿಯನ್ನು ಆಧರಿಸಿದ ಈ ಚಿತ್ರ ಕೂಡ ಸೆನ್ಸಾರ್‌ನ ಅವಕೃಪೆಗೆ ಪಾತ್ರವಾಗಿತ್ತು. ಮದರಾಸಿನ ಪ್ರಾದೇಶಿಕ ಸಮಿತಿ ಹಾಗೂ ಮುಂಬೈನ ಕೇಂದ್ರ ಸೆನ್ಸಾರ್ ಮಂಡಳಿಗಳೆರಡೂ ಚಿತ್ರದ ಪ್ರದರ್ಶನಕ್ಕೆ ಅನುಮತಿ ನಿರಾಕರಿಸಿದವು. ಸೆನ್ಸಾರ್ ಮಂಡಳಿಯ ಈ ಮಡಿವಂತಿಕೆಯನ್ನು ವಿರೋಧಿಸಿ ದೇಶದ ಹದಿನೈದು ಬುದ್ಧಿಜೀವಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದರು. ಆಗ ಕೇಂದ್ರದ ವಾರ್ತಾ ಸಚಿವರಾಗಿದ್ದ ಇಂದ್ರಕುಮಾರ್ ಗುಜ್ರಾಲ್ ಅವರು ಮಧ್ಯಪ್ರವೇಶಿಸಿ ಸೆನ್ಸಾರ್ ಮುಟ್ಟುಗೋಲು ಹಾಕಿಕೊಂಡಿದ್ದ ಚಿತ್ರವನ್ನು ತೆರೆಕಾಣಲು ಅವಕಾಶ ಮಾಡಿಕೊಟ್ಟರು.

'ಸಂಸ್ಕಾರ' ಚಿತ್ರದ ಬೆನ್ನಹಿಂದೆಯೇ ತೆರೆಕಂಡ ಬಿ.ಎ. ಅರಸು ಕುಮಾರ್ ಅವರ 'ಬೋರೇಗೌಡ ಬೆಂಗಳೂರಿಗೆ ಬಂದ' (1970) ಕೂಡ ಸೆನ್ಸಾರ್ ಸಮಸ್ಯೆಯನ್ನು ಎದುರಿಸಿಯೇ ತೆರೆಕಂಡಿತು.

### ಕೌಬಾಯ್ ಕುಳ್ಳ

ದ್ವಾರಕೀಶ್ ಅಭಿನಯದ 'ಕೌಬಾಯ್ ಕುಳ್ಳ' ಸೆನ್ಸಾರ್ ಸಮಸ್ಯೆಯಿಂದಾಗಿ ಬಿಡುಗಡೆಯ ತೊಂದರೆ ಎದುರಿಸಬೇಕಾಯಿತು. ಒಮ್ಮೆ ಸೆನ್ಸಾರ್‌ಗೆ ಒಳಗಾಗಿದ್ದ 'ಕೌಬಾಯ್ ಕುಳ್ಳ' ಬಿಡುಗಡೆಯ ದಿನಾಂಕ ಪ್ರಕಟಿಸಿತ್ತು. 1973ರ ಜುಲೈ 12ರಂದು ತೆರೆಕಾಣಿಸಲು ಚಿತ್ರದ ನಿರ್ಮಾಪಕರು ಸಿದ್ಧತೆ ನಡೆಸಿದ್ದರು. ಆದರೆ, ಮತ್ತೆ ಸೆನ್ಸಾರ್ ಮಂಡಳಿಯಿಂದ ನಿರ್ಮಾಪಕರಿಗೆ ಬುಲಾವ್ ಹೋಯಿತು. ಅದಕ್ಕೆ ಮೊದಲು ಎರಡು ಸಲ ಸಿನಿಮಾ ವೀಕ್ಷಿಸಿ ಕೆಲವು ಕಟ್‌ಗಳಿಗೆ ಶಿಫಾರಸು ಮಾಡಿದ್ದ ಸಮಿತಿ, ಇದ್ದಕ್ಕಿದ್ದಂತೆ ತನ್ನ ನಿರ್ಧಾರವನ್ನು ಬದಲಿಸಿತು. ಚಿತ್ರವನ್ನು 'ಪುನರ್ ಪರಿಶೀಲನಾ ಸಮಿತಿ'ಗೆ ಸಾಗಹಾಕಿತು.

